ನಾನು ತಕ್ಷಣವೇ ಈ ವಿಷಯದಲ್ಲಿ ಕ್ರಮವನ್ನು ತೆಗೆದು ಕೊಳ್ಳುತ್ತೇನೆ. ಅಲ್ಲಿ ಡಿಸ್ಟ್ರಿಬ್ಯೂಷನ್ ಕೆಲಸವನ್ನು ಬಹಳ ದಿವಸಗಳಿಂದ ಹಾಗೆ ಉಳಿಸಿಕೊಂಡು ಬಂದಿದ್ದರಿಂದ ಈ ಒಂದು ತೊಂದರೆಯಾಗಿದೆ. ಆ ಡಿಸ್ಟ್ರಿಬ್ಯೂಷನ್ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಆ ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸತಕ್ಕಂಥಾದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಈಗ ಮುಂದಿನ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಮಾನ್ಯ ಹಂಪನಗೌಡ ಬಾದರ್ಲಿ ಮತ್ತು ಇತರರು ಹೈದರಾಬಾದ್ ಕರ್ನಾಟಕದ ವಿಷಯದಲ್ಲಿ, ಒಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಹಂಪನಗೌಡ ಬಾದರ್ಲಿರವರು ಕೊಟ್ಟಿರುವ noticeಗೆ ನಾನು ಕೂಡ signatory ಇದ್ದೇನೆ. ನನಗೂ ತಾವು ಮಾತನಾಡಲು ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು : ಇನ್ನೂ ಎರಡು ಮೂರು calling attention ಇದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಹಂಪನಗೌಡರದು, ನನ್ನದು ಮತ್ತು ಮಾನ್ಯ ಗೋಪಾಲ ಪೂಜಾರಿಯವರು .....

ಅಧ್ಯಕ್ಷರು : ನೀವು ಕೇಳಿದ್ದೀರಿ. ಬೆಳಿಗ್ಗೆ ಮಾನ್ಯ ಖಿರ್ಗೆಯವರು ಪ್ರಸ್ತಾಪ ಮಾಡಿದ ವಿಚಾರದಲ್ಲಿ ದೀರ್ಘವಾಗಿ ಚರ್ಚೆಯಾಗಿದೆ. ಅದೇ ವಿಚಾರವನ್ನು ನೀವು ಪ್ರಸ್ತಾಪ ಮಾಡುವುದಕ್ಕೆ ಕೇಳಿದ್ದೀರಿ. ಮತ್ತೆ ಅದನ್ನು ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ಈಗ ಮಾನ್ಯ ಎಂ.ವೈ. ಪಾಟೀಲರು ಪ್ರಸ್ತಾಪ ಮಾಡಿ.

9. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ: ಗುಲ್ಬರ್ಗಾ ಜಿಲ್ಲೆಯ ಅಫಜಲಪುರ – ಹೊಸೂರು ರಸ್ತೆಯನ್ನು ಅಭಿವೃದ್ಧಿಪಡಿಸುವ ಕುರಿತು.

ಶ್ರೀ ಎಂ.ವೈ. ಪಾಟೀಲ್ (ಅಫಜಲಪುರ) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಅಫಜಲಪುರ–ಹೊಸೂರು ರಸ್ತೆಯನ್ನು ಮೇಲ್ದರ್ಜೆಗೇರಿಸಿ ರಾಜ್ಯ ಹೆದ್ದಾರಿಯೆಂದು ಘೋಷಣೆ ಮಾಡಿ 18 ವರ್ಷಗಳಾದವು. ಈ ರಸ್ತೆ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ತಾಲ್ಲೂಕಿಗೆ ಇದು ಒಂದೇ ಮುಖ್ಯ ರಸ್ತೆ ಇರುವಂಥದ್ದು. ಇದು ಮಹಾರಾಷ್ಟ್ರ, ಬಿಜಾಪುರ ಮತ್ತು ಬೆಳಗಾಂ ಭಾಗಕ್ಕೆ ಹೋಗುವ ಏಕೈಕ ಪ್ರಮುಖ ರಸ್ತೆಯಾಗಿದ್ದು ಈ ರಸ್ತೆ ಮೇಲೆ ವಾಹನ ಒತ್ತಡ ಬಹಳಷ್ಟು ಇದೆ. ಈ ರಸ್ತೆಯು ರಾಜ್ಯದ ಹೆದ್ದಾರಿಯಾಗಿದ್ದರೂ ಕೂಡ ಏಕಮುಖವಾಗಿದೆ. ಅಲ್ಲದೆ 6 ಕಿ.ಮೀ. ರಸ್ತೆ ಡಾಂಬರೀಕರಣವಾಗದೆ ಉಳಿದು ಜೆಲ್ಲಿ ರಸ್ತೆ ಮಾತ್ರವಾಗಿದೆ. ತಗ್ಗು ಗುಡ್ಡೆಗಳಂತೂ ವಿಪರೀತವಾಗಿದೆ. ಈ ರಸ್ತೆಯು ರೈತರು ನೇಗಿಲು ಹೂಳಿದ ಜಮೀನಿನಂತಿದೆ. ಈ ರಸ್ತೆಯಲ್ಲಿ ಓಡಾಟ ಮಾಡುವ ಜನರು ಶಾಪವನ್ನು ಹಾಕುತ್ತಿದ್ದಾರೆ ಮತ್ತು ಈ ರಸ್ತೆಯ ದುರಸ್ತಿಗಾಗಿ ಅನೇಕ ಸಂಘಟನೆಗಳು ಹೋರಾಟಕ್ಕೆ ಇಳಿದಿದ್ದಾರೆ. ಈಗ ಕೆಲವೊಂದು ಸಂಘಟನೆಗಳು ಸರದಿ ಉಪವಾಸ ಕೈಗೊಂಡಿದ್ದಾರೆ.

ಈ ರಸ್ತೆಯನ್ನು K.R.D.C.L., ನಿಂದ ಅಭಿವೃದ್ಧಿಪಡಿಸಲು ನೇಮಿಸಲಾಗಿದ್ದು, ಗುತ್ತಿಗೆದಾರನು ಕೆಲಸ ಮಾಡದೆ ಕೆಲಸ ಹಾಗೆಯೇ ನಿಂತಿದೆ. ಆದ್ದರಿಂದ, ಈ ರಸ್ತೆಯನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಪಡಿಸಲು ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ, ಗುಲ್ಬರ್ಗ ವ್ಯಾಪ್ತಿಯಲ್ಲಿ ಗುಲ್ಬರ್ಗ ಹೊಸೂರು ರಾಜ್ಯ ಹೆದ್ದಾರಿ–22 ಕಿ.ಮೀ. 0.00 ರಿಂದ 99.80 ಇದ್ದು ಒಟ್ಟು 99.80 ಕಿ.ಮೀ. ಉದ್ದವಿರುತ್ತದೆ. ಸದರಿ ರಾಜ್ಯ ಹೆದ್ದಾರಿಯ ಕೊನೆಯ 6 ಕಿಮೀ. ಜೆಲ್ಲಿ ರಸ್ತೆಯಾಗಿದ್ದು, ಉಳಿದ ರಸ್ತೆ ಭಾಗವು ಡಾಂಬರೀಕರಣವಾಗಿರುತ್ತದೆ.

ಈ ವರ್ಷದ ಭಾರಿ ಮಳೆಯಿಂದಾಗಿ ರಾಜ್ಯ ಹೆದ್ದಾರಿಯು ಹಾಳಾಗಿರುತ್ತದೆ. ಸದರಿ ರಸ್ತೆ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲಾಗಿರುವ 3 ವರ್ಷಗಳ (2005–08) ರಾಜ್ಯ ಹೆದ್ದಾರಿಗಳ ನಿರ್ವಹಣೆಯ ಯೋಜನೆಯ ಗುಲ್ಬರ್ಗ ವಿಭಾಗದ ಪ್ಯಾಕೇಜ್–2ರ ಅಡಿಯಲ್ಲಿ ಶ್ರೀ ಎ.ಕೆ. ಪಾಟೀಲ್, ಸೂರತ್ ಇವರಿಗೆ ವಹಿಸಿದ್ದು, ದಿನಾಂಕ 19–9–2005 ರಂದು ಕಾಮಗಾರಿಯು ಪ್ರಾರಂಭಗೊಂಡಿದೆ. ಇದರ ಅಂದಾಜು ಮೊತ್ತ ರೂ. 299.00 ಲಕ್ಷಗಳಿದ್ದು, ಗುತ್ತಿಗೆದಾರರು ಎಲ್ಲಾ ಕಾಮಗಾರಿಗಳನ್ನು 18–9–2006 ರೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ.

ಕಾಮಗಾರಿಯ ಪ್ರಗತಿಯು ನಿಧಾನವಾಗಿದ್ದು, ತ್ವರಿತಗತಿಯ್ಲಲಿ ನಿರ್ವಹಿಸಲು ಈಗಾಗಲೇ ನಿಗಮದಿಂದ ನೋಟೀಸನ್ನು ನೀಡಲಾಗಿದೆ. ನಿರ್ವಹಣೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ಗುತ್ತಿಗೆದಾರರು ಕರಾರಿನಂತೆ ಸೂಕ್ತ ಪ್ರಗತಿಯನ್ನು ನೀಡದಿದ್ದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು. ಈ ಒಂದು ರಸ್ತೆಯ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಲು ಸಂಬಂಧಪಟ್ಟವರಿಗೆ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರ ಹಿಂದಿನ ಸರ್ಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆದು ಆ ಸಭೆಯಲ್ಲಿ ಚರ್ಚೆ ಮಾಡಿ ಈ ರಸ್ತೆಯನ್ನು K-SHIP ಮುಖಾಂತರ ಮಾಡಿಸುವ ನಿರ್ಣಯವನ್ನು ತೆಗೆದುಕೊಂಡಿದ್ದರು. ಆದಕಾರಣ, ಈಗಿನ ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಭರವಸೆ ಕೊಡಬೇಕು. K-SHIP ಮುಖಾಂತರ ಈ ರಸ್ತೆಯನ್ನು ಅಭಿವೃದ್ಧಿಪಡಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದೇ ತಿಂಗಳು 25, 26ನೇ ತಾರೀಖು ಗುಲ್ಬರ್ಗಾ ಜಿಲ್ಲೆಯ ಪ್ರವಾಸವನ್ನು ನಾನು ಕೈಗೊಳ್ಳುತ್ತಿದ್ದೇನೆ. ಆ ಸಂದರ್ಭದಲ್ಲಿ ಸ್ಥಳ ಪರಿಶೀಲನೆಯನ್ನು ಮಾಡಿ ಅಲ್ಲಿ ಈಗಿರತಕ್ಕಂಥ ಗುತ್ತಿಗೆದಾರರು ಸರಿಯಾದ ರೀತಿಯ ಕೆಲಸವನ್ನು ಮಾಡದೇ ಬೇಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತಿರುವುದು

ನನ್ನ ಗಮನಕ್ಕೆ ಬಂದರೆ, ಆ ಕೆಲಸವನ್ನು ಮಾಡಿಸುವುದಕ್ಕೆ K-SHIP ನ ಸಹಾಯದಿಂದ ಮುಗಿಸಬೇಕೆಂದು ಅವರೇನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದಾರೆ, ಅದನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಎಸ್. ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮೊದಲನೆ ವರ್ಷವೇ 80 ಪರ್ಸೆಂಟ್ bill amount ತೆಗೆದುಕೊಂಡು ಹೋಗಿಬಿಡುತ್ತಾರೆ. Package system ಮಾಡಿದ್ದೇ ತಪ್ಪು, ಆ packageನಲ್ಲಿ 80% first year bill ತೆಗೆದುಕೊಂಡು ಹೋಗುವುದು. Next two yearsನ 20% ಸಲುವಾಗಿ ಅವರೇನೂ ಒದ್ದಾಡುವುದಿಲ್ಲ. ಅಲ್ಲಿಗೆ ಬರುವುದೇ ಇಲ್ಲ. ಆದ್ದರಿಂದ, ಆ package system ಅನ್ನೇ cancel ಮಾಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ.

ಶ್ರೀ ಎಸ್. ಜೋಸರಾಜು (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಈ ಜಿಲ್ಲೆಯೊಳಗೆ ಈ packageನಲ್ಲಿ ಕೊಟ್ಟಿರತಕ್ಕಂಥ ಕೆಲಸವನ್ನು ಪಡೆದಿರತಕ್ಕಂಥ ಗುತ್ತಿಗೆದಾರರು ಯಾರೂ ಕೆಲಸ ಮಾಡುತ್ತಿಲ್ಲ. ಈಗಾಗಲೇ ನಾವು K.R.D.C.L. ನವರ ಗಮನಕ್ಕೆ ಸಹ ತಂದಿದ್ದೇವೆ. ಈ ಏಪ್ರಿಲ್, ಮೇ ತಿಂಗಳಲ್ಲಿ ನಮಗೆ working time ಇದೆ ಎನ್ನುವುದು ತಮಗೆಲ್ಲ ಗೊತ್ತಿದೆ. ಅವರಿಗೆ ನಾವು ಪದೇ ಪದೇ request ಮಾಡಿದರೂ ಸಹ ಸರಿಯಾದ ರೀತಿಯಲ್ಲಿ ಆ contractors ಸ್ಪಂದಿಸುತ್ತಿಲ್ಲ ಎನ್ನುವ ಮಾತನ್ನು ಇವತ್ತು ರಾಯಚೂರು ಜಿಲ್ಲೆಯಲ್ಲಿ ಗುತ್ತಿಗೆ ಪಡೆದಿರತಕ್ಕಂಥ ಗುತ್ತಿಗೆದಾರರಿಂದ ನಮಗೆ ಮಾಹಿತಿ ಸಿಗುತ್ತಿದೆ. ದಯವಿಟ್ಟು ತಾವು ಅಧಿಕಾರಿಗಳಿಗೆ ಹೇಳಿ ಗುತ್ತಿಗೆದಾರರು ಏನು ಕೆಲಸವನ್ನು ತೆಗೆದುಕೊಂಡಿದ್ದಾರೆ. ಆ ರಸ್ತೆಗಳನ್ನು ಮುಗಿಸದಿದ್ದರೆ ಮತ್ತೆ ಮಳೆಗಾಲ ಬಂದರೆ ನಮಗೆ ಬಹಳ ತೊಂದರೆಯಾಗುತ್ತದೆ. ಆ package system introduce ಮಾಡಿರುವುದರಿಂದ, ಅವರು ಆ package ಅನ್ನು ತಮ್ಮ ಜೊತೆಯಲ್ಲಿಟ್ಟುಕೊಂಡಿರುವುದರಿಂದ, ಬೇರೆಯವರು ಯಾರೂ ಅಂದರೆ P.W.D. ಯವರು ಕೆಲಸ ಮಾಡುವುದಿಲ್ಲ ಅಥವಾ ಗುತ್ತಿಗೆದಾರರೂ ಸಹ ಬಂದು ಕೆಲಸ ಮಾಡುವುದಿಲ್ಲ. ಈ package ಅನ್ನು ತೆಗೆದುಕೊಂಡ contractor ಯಾರಿದ್ದಾರೆ, ಅವರ Officer ಸಹ ಯಾರು ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನಮಗೇನೂ ಸಂಬಂಧವಿಲ್ಲ, ಅದೆಲ್ಲವನ್ನು K.RD.C.L. ನವರು ನೋಡುತ್ತಾರೆಂದು P.W.D. ಇಲಾಖೆಯವರು ಹೇಳುತ್ತಿದ್ದಾರೆ. ಹೀಗಾಗಿ ತಕ್ಷಣ ಈ ಎರಡು ತಿಂಗಳೊಳಗಾಗಿ ಅವರು ಈ ಕೆಲಸಗಳನ್ನು ಕೈಗೆತ್ತಿಕೊಳ್ಳದಿದ್ದರೆ ಮುಂದಿನ ಮಳೆಗಾಲದಲ್ಲಿ ನಾವು ಸಾಕಷ್ಟು ತೊಂದರೆಯನ್ನು ಅನುಭವಿಸತಕ್ಕಂಥ ಸಂಭವವಿದೆ. ರಾಯಚೂರು ಜಿಲ್ಲೆಯಲ್ಲಿ ಏನು package ಅನ್ನು ತೆಗೆದುಕೊಂಡಿದ್ದಾರೆ, ಅದರ preliminary works ಅನ್ನು ಸಹಿತ ಅವರು ತೆಗೆದುಕೊಂಡಿಲ್ಲ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ಅಫಜಲಪುರ ರಸ್ತೆ ಅಂತೂ single ರಸ್ತೆಯಾಗಿದೆ. ವಾಹನ ಎದುರುಗಡೆಯಿಂದ ಬಂದರೆ ಮತ್ತೊಂದು ವಾಹನಕ್ಕೆ

ಹೋಗು ವುದಕ್ಕಾಗುವುದಿಲ್ಲ. ಅಂಥ ರಸ್ತೆ 18 ವರ್ಷಗಳಿಂದ ಇದೆ. ಅದನ್ನು ಮೇಲ್ದರ್ಜೆಗೇರಿಸಿ ರಾಜ್ಯ ಹೆದ್ದಾರಿ ಎಂದು ಮಾಡಿದರು. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, 'ಬಡಕಲು ಮನುಷ್ಯನಿಗೆ ಭೀಮಸೇನ' ಎಂದು ಹೆಸರಿಟ್ಟ ಹಾಗೆ ಆಗಿದೆ. ಆ ರೀತಿ ಹೆಸರಿಟ್ಟರೆ ಅವರು ಭೀಮಸೇನ ಆಗಬಹುದಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, package ವ್ಯವಸ್ಥೆಯಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕಂಥದ್ದಕ್ಕೆ ಹಿಂದೆ ಏನು ತೀರ್ಮಾನಗಳಾಗಿವೆ, ಈಗ ಸದಸ್ಯರುಗಳಿಗೆ package ವ್ಯವಸ್ಥೆಯಿಂದ ಕಾಮಗಾರಿಗಳು ಸರಿಯಾದ ರೀತಿಯಲ್ಲಿ, ಸಮರ್ಪಕವಾಗಿ ಆಗುವುದಿಲ್ಲವೆನ್ನುವ ಒಂದು ವಿಷಯದ ಬಗ್ಗೆ ಗಮನವನ್ನೇನು ಸೆಳೆದಿದ್ದಾರೆ, ಇವತ್ತು ಸಮರ್ಪಕವಾಗಿ ಕಾಮಗಾರಿಯನ್ನು ಆ ಒಂದು ನಿಗದಿತ ಸಮಯದಲ್ಲಿ ಸಂಪೂರ್ಣಗೊಳಿಸತಕ್ಕಂಥದ್ದಕ್ಕೆ ಸೂಕ್ತವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಇವತ್ತು package ವ್ಯವಸ್ಥೆಯಿಂದ ತೊಂದರೆಗಳು ಆಗುತ್ತವೆ ಎನ್ನುವುದಿದ್ದರೆ ಅದನ್ನು ರದ್ದುಪಡಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕಂಥದ್ದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಈಗೇನಾಗಿದೆ ಎಂದರೆ, package ಎಂದರೆ 2–3 ಜಿಲ್ಲೆಗಳನ್ನು ಸೇರಿಸಿ ಎಲ್ಲ work ಅನ್ನು ಒಬ್ಬ contractor ಗೆ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಎರಡು work tender ಆಗಿ ಆರೇಳು ತಿಂಗಳುಗಳಾಯಿತು. ಆ ಕಡೆಗೆ Contractor ಬರಲಿಲ್ಲ. ಆದ್ದರಿಂದ ಏಕೋ ಕೆಲಸ ಮಾಡಿಸುತ್ತಿಲ್ಲವೆಂದು ಜನರು ನಮ್ಮ ಮೇಲೆ ತಪ್ಪು ತಿಳಿದುಕೊಳ್ಳುತ್ತಾರೆ. ಅದಕ್ಕೋಸ್ಕರ individual workಗೆ tender ಕರೆದುಬಿಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮೊದಲೇ 80% bill amount ಅನ್ನು ಕೊಡಬೇಡಿ. At least 40 bill amount ಕೊಡಿ. ನಮ್ಮದೇನೂ ಅಡ್ಡಿಯಿಲ್ಲ.

(ಆ) ವಿಷಯ: **ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದಲ್ಲಿರುವ ರೇಣುಕಾ ಸಕ್ಕರೆ ಕಾರ್ಖಾನೆಯವರು ಸುಳ್ಳು ಭರವಸೆ ನೀಡಿ ಗ್ರಾಮಸ್ಥರನ್ನು ವಂಚಿಸಿರುವ ಕುರಿತು.**

ಶ್ರೀ ಎಂ.ವೈ. ಪಾಟೀಲ್ (ಅಫಜಲಪುರ) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮದ ಶ್ರೀ ಭಾಗ್ಯವಂತಿ ದೇವಸ್ಥಾನದ ಹತ್ತಿರ ಖಾಸಗಿ ಕಂಪನಿಯವರೊಬ್ಬರು ರೇಣುಕಾ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಮುಂದಾಗಿದ್ದಾರೆ. ಈ ಪ್ರದೇಶವು ಈಗಾಗಲೇ ಅಳಂದ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುತ್ತದೆ. ಸಹಕಾರಿ ರಂಗದಲ್ಲಿ ಇದೊಂದೇ ಸಂಸ್ಥೆಯಾಗಿರುವುದರಿಂದ ಇದನ್ನು ಪುನಃಶ್ಚೇತನಗೊಳಿಸಲು ಎಲ್ಲಾ ರೀತಿಯ ಪ್ರಯತ್ನ ನಡೆದಿದೆ. ಈ ಸಂದರ್ಭದಲ್ಲಿ ಖಾಸಗಿ ಕಂಪನಿಯು ಈ ಪ್ರದೇಶದಲ್ಲಿ ಸ್ಥಾಪಿತವಾದರೆ ಸಹಕಾರಿ ಕ್ಷೇತ್ರದಲ್ಲಿ ಇರುವ ಸಕ್ಕರೆ